ಹೇಳಿದರೆ, ಯಾವ ರೀತಿ ತಪ್ಪಾಗುತ್ತದೆ? ನಿಮ್ಮ ತಾರ್ಕಿಕ ಲೆಕ್ಕದಲ್ಲಿಯೇ ಇದೂ ಕೂಡ ಜೀವನದ ಭದ್ರತೆ, ಆರೋಗ್ಯ ಮತ್ತು ಅಪಘಾತಗಳು ಇವುಗಳಿಗೆ ಸಂಬಂಧಪಟ್ಟಂತೆ ನಿಯಂತ್ರಣ ಮಾಡಲಿಕ್ಕೆ ಸಮಾಜ ಕೆಲವು ತಮ್ಮ ವೈಯಕ್ತಿಯ ಸ್ವಾತಂತ್ರ್ಯದ ಹಕ್ಕನ್ನು ಸರ್ಕಾರಕ್ಕೆ ಮತ್ತು ಸಮುದಾಯಕ್ಕೆ ಕೊಟ್ಟು ಮತ್ತೆ ಅದು ರಕ್ಷಣೆಯನ್ನು ಪಡೆಯುತ್ತದೆ. ಆ ಕಾರಣಕ್ಕಾಗಿಯೇ ಇದನ್ನು ಸಾರ್ವಜನಿಕರ ಹಿತದೃಷ್ಟಿಯಿಂದ ಮಾಡಿದ್ದೇವೆ. ಮತ್ತೊಂದು, ನಮ್ಮ ಸಾವು ನಮ್ಮ ಕೈಯಲ್ಲಿದೆ ಎಂಬ ಮಾತನ್ನು ಹೇಳುತ್ತಾರೆ; ಅದಲ್ಲ. ಕಾಂಟ್ರಿಬ್ಯೂಟರಿ ನೆಗ್ಲಿಜನ್ಸ್ ಎನ್ನತಕ್ಕಂಥಾದ್ದು ಕೂಡ ನಮ್ಮ ಕಾನೂನಿನ ಅಡಿಯಲ್ಲಿ ಇದೆ. ನಾನು ಸರಿಯಾದಂಥ ರೀತಿಯಲ್ಲಿ ವಾಹನವನ್ನು ಚಾಲನೆ ಮಾಡಿಕೊಂಡು ಹೋಗುತ್ತಾ ಇದ್ದರೂ ಕೂಡ, ಬೇರೊಬ್ಬನ ಅಜಾಗೃತಿಯಿಂದ ಸಾವು ಆಗುವಂಥ, ಅಪಘಾತ ಆಗುವಂಥ ಸಂಭವಗಳು ಇರುವ ಕಾರಣಕ್ಕಾಗಿಯೇ ಇದು ಅತ್ಯಂತ ಉತ್ತಮವಾಗಿರತಕ್ಕಂಥ ನಿರ್ಧಾರ. ಆ ಕಾರಣಕ್ಕಾಗಿಯೇ ಹೆಲ್ಮೆಟ್ ಧರಿಸುವುದನ್ನು ಕಡ್ಡಾಯಗೊಳಿಸುತ್ತೇವೆ; ಇದು ನಮ್ಮ ಸರ್ಕಾರದ ನಿಲುವು.

ಶ್ರೀ ವಾಟಾಳ್ ನಾಗರಾಜ್ : ಹೆಣ್ಣು ಮಕ್ಕಳು, ಸಣ್ಣ ಮಗು ಕೂಡಿಸಿಕೊಂಡು ಬರುತ್ತಾರೆ, ಅವರು ಹೆಲ್ಮೆಟ್ ಆ ಮಗುವಿಗೆ ಹಾಕುವುದಕ್ಕಾಗುತ್ತದೆಯೇ? ಆದ್ದರಿಂದ, ಈ ಕಡ್ಡಾಯ ಸರಿಯಲ್ಲ. ಹೆಲ್ಮೆಟ್ ಧರಿಸುವುದನ್ನು ಕಡ್ಡಾಯ ಮಾಡುವ ನೀತಿಯನ್ನು ವಿರೋಧಿಸಿ ನಾನು ಸಭಾತ್ಯಾಗ ಮಾಡುತ್ತೇನೆ. ಈ ಕಡ್ಡಾಯ ಎನ್ನುವುದನ್ನು ನಾನು ಒಪ್ಪುವುದಿಲ್ಲ. ಹಿಂದುಗಡೆ ಸೀಟಿನಲ್ಲಿ ಕುಳಿತವರಿಗೆ ವಿನಾಯಿತಿ ಕೊಡಬೇಕು. ಏಕೆಂದರೆ, ಅದು ತಪ್ಪಾಗುತ್ತದೆ. ಹಿಂದುಗಡೆ ಸೀಟಿನವರೂ ಹೆಲ್ಮೆಟ್ ಇಟ್ಟುಕೊಂಡು, ಮುಂದುಗಡೆಯವರೂ ಹೆಲ್ಮೆಟ್ ಇಟ್ಟುಕೊಂಡು, ಮಗು ಇದ್ದರೆ, ಆ ಮಗುವಿಗೂ ಹೆಲ್ಮೆಟ್ ಇಟ್ಟುಕೊಂಡು ಹೋಗಬೇಕೆಂಬುದು ಸರಿಯಲ್ಲ. ನಿಮಗೆ ಸ್ವಲ್ಪ ದಯೇ ಇರಲಿ. ಕರುಣೆ ಇರಲಿ.

(ಶ್ರೀ ವಾಟಾಳ್ ನಾಗರಾಜ್‌ರವರು ಸಭಾತ್ಯಾಗ ಮಾಡಿದರು.)

(ಅಡಚಣೆ)

ಶ್ರೀ ಕೆ. ಶ್ರೀನಿವಾಸಗೌಡ : ಈ ವಿಧಾನ ಸಭೆಯಲ್ಲಿ ವಾಟಾಳ್ ನಾಗರಾಜರು ಒನ್ ಮ್ಯಾನ್ ಆರ್ಮಿ ಆಗಿಬಿಟ್ಟಿದ್ದಾರೆ. ಅವರಿಗೆ ಯಾರದ್ದೂ ಸೈನ್ಯ ಬೇಕಾಗಿಲ್ಲ. ಅವರೇ ಸೈನ್ಯಾಧಿಪತಿ, ಅವರೇ ಸೈನ್ಯ.

(ಅಡಚಣೆ)

(ಇ) ವಿಷಯ: ಪೊಲೀಸ್ ವೆರಿಫಿಕೇಷನ್ ಶುಲ್ಕ ವಹಿಸಿರುವ ಬಗ್ಗೆ.

ಶ್ರೀ ನೆ.ಲ. ನರೇಂದ್ರಬಾಬು (ರಾಜಾಜಿನಗರ) : ಮಾನ್ಯ ಸಭಾಧ್ಯಕ್ಷರೇ, ಇವತ್ತು ತಮ್ಮ ಮುಖೇನ ಸರ್ಕಾರಕ್ಕೆ ಮತ್ತೊಮ್ಮೆ ಸದನದಲ್ಲಿ ಮನವಿ ಮಾಡುವುದೇನೆಂದರೆ, ಇವತ್ತು ಬಹಳಷ್ಟು ನಿರುದ್ಯೋಗ ಸಮಸ್ಯೆ ಕೊಡುತ್ತಾ ಇದೆ. ಯಾವುದೇ ನಿರುದ್ಯೋಗಿಗಳು, ಸರ್ಕಾರಿ, ಖಾಸಗಿ ಅಥವಾ ಮಲ್ಟಿನ್ಯಾಷನಲ್ ಕಂಪನಿಗಳಿಗೆ ಅಪ್ಲೈ ಮಾಡಬೇಕಾದರೆ, ಪೋಲಿಸ್ ಕ್ಲಿಯರೆನ್ಸ್ ಬೇಕಾಗುತ್ತದೆ. ಪೊಲೀಸ್ ಇಲಾಖೆಯಲ್ಲಿ ಅಥವಾ ಸಮಾಜದಲ್ಲಿ ಯಾವುದೇ ಅಪರಾಧಗಳು ಇಲ್ಲವೆಂದು ಪೊಲೀಸ್ ವೆರಿಫಿಕೇಷನ್ ಆಗಿ, ಕ್ಲಿಯರೆನ್ಸ್ ತೆಗೆದುಕೊಳ್ಳಬೇಕಾಗುತ್ತದೆ. ಅದಕ್ಕೆ ಸಂಬಂಧಪಟ್ಟ ಹಾಗೆ ಹಿಂದೆ

ಸದನದಲ್ಲಿ ಈ ಪ್ರಶ್ನೆ ಬಂದಿತ್ತು. ಇದಕ್ಕೆ 50 ರೂಪಾಯಿ ಇತ್ತು, ಅದನ್ನು ಇವತ್ತು ಮೂರು ಸಾವಿರ ರೂಪಾಯಿ ಮಾಡಿದ್ದಾರೆ. ಹಲವಾರು ಬೇರೆ ಬೇರೆ ವೆರಿಫಿಕೇಷನ್‌ಗಳಿಗೆ ಒಂದು ಸಾವಿರ ಇದ್ದುದ್ದನ್ನು ಎರಡು ಸಾವಿರ ರೂಪಾಯಿ ಮಾಡಿದ್ದಾರೆ. ಈ ಆದೇಶವನ್ನು ಮಾಡಿಫೈ ಮಾಡುತ್ತೇವೆಂದು ಸದನದಲ್ಲಿ ಭರವಸೆ ಕೊಟ್ಟಿದ್ದರು. ಅದನ್ನು ಇದುವರೆಗೂ ಮಾಡಿಲ್ಲ. ಸ್ವಾಮಿ, ಇವತ್ತು ಅಪ್ಲಿಕೇಷನ್ ಹಾಕುವುದಕ್ಕೆ ಬಹಳಷ್ಟು ಕಷ್ಟ ಇದೆ. ಒಂದು ಸಾವಿರ ಪೋಸ್ಟ್ ಇದ್ದರೆ, ಐದು ಲಕ್ಷ, ಆರು ಲಕ್ಷ ಜನ ಅಪ್ಲಿಕೇಷನ್ ಹಾಕುತ್ತಾರೆ. ಅವರ ಗತಿ ಏನಾಗಬೇಕು? ಇದೊಂದು ಮೆಂಟಲ್ ಹರ್ಯಾಸ್‌ಮೆಂಟ್. ದಯವಿಟ್ಟು ಹೇಳುತ್ತೇನೆ, ಈ ಹೆಚ್ಚುವರಿ ಮಾಡಿರುವ ಹಣವನ್ನು 50 ರೂಪಾಯಿಗೇ ಇಳಿಸಬೇಕೆಂದು ಶೂನ್ಯವೇಳೆಯಲ್ಲಿ ತಮ್ಮ ಮುಖೇನ ಸಂಬಂಧಪಟ್ಟ ಸಚಿವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್ (ಗೃಹ ಹಾಗೂ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಅಧ್ಯಕ್ಷರೇ, ಸರ್ಕಾರ ದಿನಾಂಕ: 20–5–2005ರ ಆದೇಶದಂತೆ ಎಸ್.ಬಿ. 273 ಎಸ್‌ಎಸ್‌ಡಿ 2005ರಲ್ಲಿ ವಿವಿಧ ಪೊಲೀಸ್ ದೃಢೀಕರಣ ಪತ್ರಗಳು ಶುಲ್ಕವನ್ನು ಈ ಕೆಳಕಂಡಂತೆ ವಿಧಿಸಿ, ಆದೇಶ ಹೊರಡಿಸಲಾಗಿದೆ. ಈಗಾಗಲೇ, ಇದರ ಪ್ರತಿಯನ್ನು ಮಾನ್ಯ ಸದಸ್ಯರಿಗೆ ಕೊಟ್ಟಿದ್ದೇವೆ. ಮತ್ತೆ ಅದನ್ನು ಓದಬೇಕಾಗಿಲ್ಲವೆಂದು ನಾನು ಭಾವಿಸಿಕೊಂಡಿದ್ದೇನೆ. ಹಾಗೆಯೇ, ಈ ಆದೇಶದಲ್ಲಿ ಸಂಘಸಂಸ್ಥೆಗಳು, ಖಾಸಗಿ ವಲಯದ ಸಂಸ್ಥೆಗಳು, ಬಹುರಾಷ್ಟ್ರೀಯ ಕಂಪನಿಗಳಿಗೆ ಈ ಸಂಬಂಧ ಅಂದರೆ, for verification of criminal antecedents ಗಳಿಗಾಗಿ ಮೂರು ಸಾವಿರ ರೂಪಾಯಿ ಶುಲ್ಕವನ್ನು ಹಾಗೂ for verification of address and local reputation ಗಾಗಿ ಆರು ಸಾವಿರ ರೂಪಾಯಿಗಳ ಶುಲ್ಕವನ್ನು ನಿಗದಿಪಡಿಸಲಾಗಿದೆ. ಕೇಂದ್ರಸರ್ಕಾರ ಹಾಗೂ ರಾಜ್ಯಸರ್ಕಾರದ ನೌಕರಿಗಾಗಿ, ಕೇಂದ್ರ ರಾಜ್ಯ ಸರ್ಕಾರದ ಸಾರ್ವಜನಿಕ ಉದ್ಯಮಗಳು ಹಾಗೂ ಇತರ ರಾಜ್ಯ ಸರ್ಕಾರದ ವಲಯಗಳ ಉದ್ಯಮಿಗಳಿಗೆ ನೌಕರಿಗಾಗಿ ಅಭ್ಯರ್ಥಿಗಳು ನಡತೆಯ ಕುರಿತು ದೃಢೀಕರಣ ಪತ್ರಕ್ಕೆ ಯಾವುದೇ ಶುಲ್ಕವನ್ನು ನಿಗದಿಪಡಿಸಿರುವುದಿಲ್ಲ. ಅದರಿಂದ ರಾಜ್ಯಸರ್ಕಾರಕ್ಕಾಗಲೀ, ಕೇಂದ್ರ ಸರ್ಕಾರಕ್ಕಾಗಲೀ ಅಥವಾ ಸಾರ್ವಜನಿಕ ಉದ್ಯಮಗಳಿಗೆ ಸಂಬಂಧಪಟ್ಟಂತೆ ಸಾರ್ವಜನಿಕ ರಾಜ್ಯಸರ್ಕಾರದ ವಲಯಗಳಿಗೆ, ಅವರು ಯಾರಾದರೂ ಅರ್ಜಿಯನ್ನು ಹಾಕುವುದಾದರೆ, ಅಭ್ಯರ್ಥಿಗಳಿಂದ ನಾವು ಯಾವುದೇ ಶುಲ್ಕವನ್ನು ಪಡೆಯುವುದಿಲ್ಲ. ಆದರೆ, ಬಹುರಾಷ್ಟ್ರೀಯ ಕಂಪನಿಗಳಿಗೆ ಸಂಬಂಧಪಟ್ಟಂತೆ ಖಾಸಗಿ ಸಂಘಸಂಸ್ಥೆಗಳಿಗೆ, ವಲಯದ ಸಂಸ್ಥೆಗಳಿಗೆ ಸಂಬಂಧಪಟ್ಟಂತೆ, ಅವರು ಯಾವುದೇ ತರವಾಗಿರಕ್ಕಂಥ ಗುನ್ನೆಗಳಲ್ಲಿ, ಅಪರಾಧಗಳಲ್ಲಿ ನಿರತರಾಗಿದ್ದಾರೆಯೇ ಇಲ್ಲವೇ ಎನ್ನುವಂಥ ವಿಚಾರಕ್ಕೆ ಮತ್ತು ಅವರ ಇತಿಹಾಸವನ್ನು ಪಡೆಯಲಿಕ್ಕೆ, ಅವರು ಕೊಡುವಂಥ ವಿಳಾಸದ ದೃಢೀಕರಣವನ್ನು ಯೋಚನೆ ಮಾಡಲಿಕ್ಕೆ ಬಹಳ ಕಷ್ಟದ ಕೆಲಸ ಆಗಿರುವ ಕಾರಣಕ್ಕಾಗಿ ಮತ್ತು ಅಂತಹ ಸಂಸ್ಥೆಗಳಿಗೆ ನಾವು ಪಡೆಯತಕ್ಕ ಸಂದರ್ಭದಲ್ಲಿ ಅನೇಕ ಕಡೆಗಳಲ್ಲಿ ತಪ್ಪಾಗಿರುವಂಥಾದ್ದನ್ನು ನಾವು ಕಂಡಿದ್ದೇವೆ. ಅಪರಾಧ ಆಗಿರತಕ್ಕಂಥಾದ್ದು, ಕೊಲೆ ಆಗಿರತಕ್ಕಂಥಾದ್ದು, ಮಹಿಳಾ ಉದ್ಯೋಗಿಗಳ ಮೇಲೆ ಅತ್ಯಾಚಾರವಾಗಿ ಕೊಲೆಯಾಗಿರತಕ್ಕಂಥಾದ್ದು, ಇವೆಲ್ಲವುಗಳ ಹಿನ್ನೆಲೆಯಲ್ಲಿ ಮೂರು ಸಾವಿರ ರೂಪಾಯಿಗಳನ್ನು ಕ್ರಿಮಿನಲ್ antecedents ಗೆ ಸಂಬಂಧಪಟ್ಟಂತೆ ಮತ್ತು ಅವರ ವಿಳಾಸ ಮೊದಲಾದ ವಿಷಯಗಳ ಬಗ್ಗೆ, ಅವರ ಚಾರಿತ್ರ್ಯದ ಬಗ್ಗೆ ವಿವರಗಳನ್ನು ಕಲೆ ಹಾಕಲಿಕ್ಕೆ ಆರು ಸಾವಿರ ರೂಪಾಯಿಗಳನ್ನು

ನಿರ್ಧಾರ ಮಾಡಿದ್ದೇವೆ. ಅದು ಹೆಚ್ಚು ಎಂದು ನಾನು ಭಾವಿಸಿಲ್ಲ. ಬಹುರಾಷ್ಟ್ರೀಯ ಕಂಪನಿಗಳಲ್ಲಿ ಪ್ರಾರಂಭದ ಹಂತದಲ್ಲಿಯೇ 20 ಸಾವಿರಕ್ಕಿಂತಲೂ ಹೆಚ್ಚು ಸಂಬಳ ಬರುವ ಕಾರಣ ಇರುವುದರಿಂದ, ಅಷ್ಟನ್ನು ಅವರು ಕೊಡಬಹುದೆಂದು ನಾನು ಭಾವಿಸಿಕೊಂಡು 2005ರಲ್ಲೇ ಈ ಅಧಿಸೂಚನೆಯನ್ನು ಹೊರಡಿಸಲಾಗಿದೆ.

ಶ್ರೀ ಅಂಜನಮೂರ್ತಿ : ಮಾನ್ಯ ಸಭಾಧ್ಯಕ್ಷರೇ, ಮೊನ್ನೆ ತಮ್ಮ ಚೇಂಬರಿಗೆ ಬಂದು ಕಾಲಿಂಗ್ ಅಟೆನ್‌ಷನ್ ಪತ್ರ ಕೊಟ್ಟಿದೆ. ಇವತ್ತು ಅಜೆಂಡಾದಲ್ಲಿ ಹಾಕುತ್ತೇವೆಂದು ಹೇಳಿದ್ದೀರಿ, ಆದರೆ, ಇವತ್ತು ಬಂದಿಲ್ಲ.

ಅಧ್ಯಕ್ಷರು : ಅವಕಾಶ ಕೊಡುತ್ತೇನೆ.

ಶ್ರೀ ನೆ.ಲ. ನರೇಂದ್ರಬಾಬು : ನಿರುದ್ಯೋಗಿ ಯುವಕರು ಒಂದು ಸಣ್ಣ ಸೆಕ್ಯುರಿಟಿ ಜಾಬ್ ಸೇರಬೇಕಾದರೂ ಹೇಳುತ್ತಾರೆ. ಪ್ರತಿನಿತ್ಯ ಪೊಲೀಸ್ ಸ್ಟೇಷನ್‌ಗೆ ಹೋಗಿ ಕೇಳಿದಾಗ ಹೇಳುತ್ತಾರೆ. ನೋಡಿ ಸುತ್ತೋಲೆ ಬಂದಿದೆ, ಕಮೀಷನರ್ ಆಫೀಸಿಗೆ ಹೋಗಿ ಮೂರು ಸಾವಿರ ಕಟ್ಟಿ ಬಂದರೆ, ನಿಮಗೆ ಕ್ಲಿಯರೆನ್ಸ್ ಸಿಗುತ್ತದೆ ಎಂದು ಹೇಳುತ್ತಾರೆ. ದಯವಿಟ್ಟು ಹೇಳುತ್ತೇನೆ. ಮಾನ್ಯ ಎಂ.ಪಿ. ಪ್ರಕಾಶ್‌ರವರಿಗೆ ಆ ನೋವು ಮತ್ತು ಆ ಬಾಧೆ ಬಹುಶಃ ಗಮನಕ್ಕೆ ಬರದೇ ಇರಬಹುದು. ಪ್ರತಿನಿತ್ಯ ನಾವು ಶಾಸಕರುಗಳು ಸಣ್ಣಪುಟ್ಟ ಕೆಲಸಗಳಿಗೆ ಪೊಲೀಸ್ ಠಾಣೆಗಳಿಗೆ ಹೋಗಬೇಕಾಗಿದೆ. ಸಣ್ಣ ಕೆಲಸಗಳು ಒಂದು ಸೆಕ್ಯುರಿಟಿ ಗಾರ್ಡ್‌ಗಳಿಗೆ 2 ಸಾವಿರ ರೂಪಾಯಿ ಸಂಬಳ ಕೊಡತಕ್ಕಂಥಾದ್ದು, ದಯವಿಟ್ಟು ಹೇಳುತ್ತೇನೆ ಹಿಂದೆ ಏನಿತ್ತು ಅದನ್ನೇ ಮತ್ತೆ ತರಬೇಕು ಇಲ್ಲದಿದ್ದರೆ ಬಹಳ ಕಷ್ಟವಾಗುತ್ತದೆ. ತಾವು ಕೆಲಸಕ್ಕೆ ಸೆಲೆಕ್ಟ್ ಮಾಡಿ ಆದ ಮೇಲೆ ಬೇಕಾದರೆ ನೀವು ಹೇಳಿದ ಹಾಗೆ ಯಾವುದಾದರೂ ಮಲ್ಟಿ ನ್ಯಾಷನಲ್ ಕಂಪನಿ ಅಂತ ತಾವು ಏನು ಹೇಳಿದಿರಿ, ಅಂತಹವರ ಚೆಕ್ಕಿಂಗ್‌ಗೆ ಬೇಕಾದರೆ ಅಷ್ಟು ಚಾರ್ಜ್ ಮಾಡಲಿ ಆದರೆ ಸಣ್ಣ ಪುಟ್ಟ ಉದ್ಯೋಗಗಳಿಗೆ ಹೋಗಲಿಕ್ಕೆ 2 ಸಾವಿರ ರೂಪಾಯಿ ಮಾಡುವುದಾದರೆ ಹೇಗೆ ಸ್ವಾಮಿ? ಇದು ನ್ಯಾಯವೇ? ಇದು ಅನ್ಯಾಯವಲ್ಲವೇ? ಒಂದು ಪೋಸ್ಟ್‌ಗೆ ಸಾವಿರಾರು ಅರ್ಜಿಗಳು ಹಾಕುತ್ತಾರೆ. ಪ್ರತಿಯೊಬ್ಬರೂ ಹೋಗಿ ಈ ಸಾವಿರಾರು ರೂಪಾಯಿಗಳು ಆದರೆ ಹೇಗೆ? ಅವರು ಅರ್ಜಿ ತೆಗೆದುಕೊಳ್ಳುವುದಕ್ಕೆ ಕಷ್ಟ ಇರುತ್ತದೆ. ಇದು ಬಹಳ ದುಬಾರಿ ದಯವಿಟ್ಟು ಇದು ನಿರುದ್ಯೋಗಿಗಳ ಯುವಕ, ಯುವತಿಯರಿಗೆ ಘೋರ ಅನ್ಯಾಯ ಇದನ್ನು ಮತ್ತೆ ವಾಪಸ್ಸು 50 ರೂಪಾಯಿಗಳಿಗೆ ತರಬೇಕು ಅಂತ ಹೇಳಿ ನಾನು ತಮ್ಮಲ್ಲಿ ಮತ್ತೆ ಮನವಿ ಮಾಡುತ್ತಿದ್ದೇನೆ.

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ಅಧ್ಯಕ್ಷರೇ, ಮಾನ್ಯ ಶಾಸಕರ ಮನವಿಯನ್ನು.....

ಅಧ್ಯಕ್ಷರು : ಶೂನ್ಯವೇಳೆಯಲ್ಲಿ ಕೇಳಿ.

ಶ್ರೀ ಅಂಜನಮೂರ್ತಿ : ಮಾನ್ಯ ಅಧ್ಯಕ್ಷರೇ, ನಾನು ಮೊನ್ನೆ ತಮ್ಮ ಕೊಠಡಿಗೆ ಬಂದು ಮಾತನಾಡಿ ಒಂದು ಗಮನ ಸೆಳೆಯುವ ಸೂಚನೆ ಬಗ್ಗೆ ಹೇಳಿದ್ದೆ. ಅದನ್ನು ಸೋಮವಾರ ಹಾಕುತ್ತೇನೆಂದು ಹೇಳಿದಿರಿ, ಆದರೆ ಇವತ್ತು ಅಜೆಂಡಾದಲ್ಲಿ ಬಂದಿಲ್ಲ.

ಅಧ್ಯಕ್ಷರು : ಶೂನ್ಯವೇಳೆಯಲ್ಲಿ ಕೇಳಿ.....

ಶ್ರೀ ಅಂಜನಮೂರ್ತಿ : ಮಾನ್ಯ ಅಧ್ಯಕ್ಷರೇ, ಶೂನ್ಯ ವೇಳೆಯಲ್ಲಿ ಕೇಳುವುದಲ್ಲ. ನಾಳೆ ಅಜೆಂಡಾದಲ್ಲಿ ಬರುವಂತೆ ಮಾಡಿ.

ಅಧ್ಯಕ್ಷರು : ಆಯಿತು.

ಶ್ರೀ ನೆ.ಲ. ನರೇಂದ್ರಬಾಬು : ಮಾನ್ಯ ಅಧ್ಯಕ್ಷರೇ, ನನ್ನ ಪ್ರಶ್ನೆಗೆ ಸರಿಯಾದ ಉತ್ತರ ಬರಲಿಲ್ಲ.

ಅಧ್ಯಕ್ಷರು : ಅವರು ಉತ್ತರ ಕೊಟ್ಟಿದ್ದಾರೆ. ತಾವು ನಿಂತುಕೊಂಡು ಕೂಗಾಡಿದರೆ ಪ್ರಯೋಜನವಿಲ್ಲ.

ಶ್ರೀ ನೆ.ಲ. ನರೇಂದ್ರಬಾಬು : ಮಾನ್ಯ ಅಧ್ಯಕ್ಷರೇ, ಉತ್ತರ ಸಮರ್ಪಕವಾಗಿ ಬರಲಿಲ್ಲ....

ಅಧ್ಯಕ್ಷರು : ಶೂನ್ಯವೇಳೆಯಲ್ಲಿ ಚರ್ಚೆಗೆ ಅವಕಾಶ ಇಲ್ಲ. ಕ್ಲಾರಿಫಿಕೇಶನ್ ಕೇಳಿದ್ದೀರಿ ಮಾನ್ಯ ಸಚಿವರು ಉತ್ತರ ಕೊಟ್ಟಿದ್ದಾರೆ.

ಶ್ರೀ ಡಿ.ಕೆ. ಶಿವಕುಮಾರ್ : ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಉತ್ತರ ಕೊಡುತ್ತಿದ್ದರು.

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ಅಧ್ಯಕ್ಷರೇ, ಮಾನ್ಯ ಶಾಸಕರು ಈ ವಿಚಾರದಲ್ಲಿ ನಿರುದ್ಯೋಗಿ ಯುವಕರ ಪರವಾಗಿ ಮಾತನಾಡಿದ್ದಾರೆ. ಅವರ ಮಾತಿನಲ್ಲೂ ಕೂಡ ಸ್ವಲ್ಪ ಅಂತಃಸತ್ವವಿರುವ ಕಾರಣಕ್ಕಾಗಿ ಸರ್ಕಾರ ಇದನ್ನು ಪುನರ್‌ಪರಿಶೀಲನೆ ಮಾಡುವ ವಿಚಾರದಲ್ಲಿ ಗಮನ ಕೊಡುತ್ತದೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಮಾನ್ಯ ಅಧ್ಯಕ್ಷರೇ, ಇದಕ್ಕೆ ಉತ್ತರ ಹಿಂದಿನ ಅಧಿವೇಶನದಲ್ಲಿಯೇ ನನಗೆ ಉತ್ತರ ಸಿಕ್ಕಿದೆ. ಆದರೆ ಏನೂ ಆಗಲಿಲ್ಲ.

ಅಧ್ಯಕ್ಷರು : ದಯಮಾಡಿ ಕೂರಬೇಕು. ಚರ್ಚೆಗೆ ಅವಕಾಶವಿಲ್ಲ. ಕ್ಲಾರಿಫಿಕೇಶನ್ ಕೇಳಿದಿರಿ ಅದಕ್ಕೆ ಉತ್ತರ ಕೊಟ್ಟಿದ್ದಾರೆ. ಪರಿಶೀಲನೆ ಮಾಡುತ್ತೇನೆ ಅಂತ. ಆದ್ದರಿಂದ ತಾವು ಕುಳಿತುಕೊಳ್ಳಬೇಕು.

(ಈ) ವಿಷಯ: ಗದಗ್ ಜಿಲ್ಲೆಯಲ್ಲಿ ಬೀಜಕ್ಕಾಗಿ ಸಹಾಯಧನ ನೀಡುವ ಬಗ್ಗೆ.

ಶ್ರೀ ಡಿ.ಆರ್. ಪಾಟೀಲ್ (ಗದಗ) : ಮಾನ್ಯ ಅಧ್ಯಕ್ಷರೇ, ಮಾನ್ಯ ಕೃಷಿ ಸಚಿವರು ಇಲ್ಲ. ನಮ್ಮಲ್ಲಿ ಗದಗ್ ಜಿಲ್ಲೆಯಲ್ಲಿ ಬೀಜಕ್ಕಾಗಿ ಸಹಾಯಧನ ಏನು ಕೊಟ್ಟಿದ್ದರು, ಅದನ್ನು ವಿತ್‌ಡ್ರಾ ಮಾಡಿಕೊಂಡಿದ್ದಾರೆ. ಅದಕ್ಕೆ ದಯವಿಟ್ಟು ವಿತ್‌ಡ್ರಾ ಮಾಡಿಕೊಂಡಿದ್ದರಿಂದ ನಮ್ಮಲ್ಲಿ ಜುಲೈ ಕೊನೆಯವರೆಗೂ ಬಿತ್ತಿಗೆ ಇರುತ್ತವೆ. ಮುಂಗಾರು ಬಿತ್ತಿಗೆ. ವಿತ್‌ಡ್ರಾ ಮಾಡಿಕೊಂಡಿದ್ದರಿಂದ ಆ ಭಾಗದ ರೈತರಿಗೆ ಸಾಕಷ್ಟು ತೊಂದರೆಯಾಗಿದೆ. ಅದಕ್ಕೆ ವಿತ್‌ಡ್ರಾ ಮಾಡಿದ್ದನ್ನು ಕೂಡಲೇ ರಿಲೀಜ್ ಮಾಡಬೇಕು ಇನ್ನೂ ಅಡಿಶನಲ್ subsidy ಅಮೌಂಟ್ ರಿಲೀಜ್ ಮಾಡಬೇಕು.

ಶ್ರೀ ಬಂಡೆಪ್ಪ ಕಾಶಂಪುರ (ಕೃಷಿ ಸಚಿವರು) : ಮಾನ್ಯ ಅಧ್ಯಕ್ಷರೇ, ಗದಗ್‌ನಲ್ಲಿ ಏನು ವಿತ್‌ಡ್ರಾ ಮಾಡಿಕೊಂಡಿದ್ದಾರೆಂದು ಅವರು ಹೇಳುತ್ತಿದ್ದಾರೆ ಆದರೆ ಅವರು ನನಗೆ ಮೊನ್ನೆಯೇ ಒಂದು ಅರ್ಜಿ ಸಲ್ಲಿಸಿದ್ದಾರೆ ಅದರ ಬಗ್ಗೆ ನಾನು ವಿಚಾರಿಸಿದ್ದೇನೆ. ಯಾವ ರೀತಿಯಲ್ಲೂ ವಿತ್‌ಡ್ರಾ ಮಾಡಿಕೊಂಡಿಲ್ಲ. 179 ಲಕ್ಷ ರೂ. ಏನು ಸ್ಯಾಂಕ್ಷನ್ ಇತ್ತು, ಅಲಾಟ್‌ಮೆಂಟ್ ಅಷ್ಟೂ ನಾವು ಕೊಡುತ್ತೇವೆಂದು ಹೇಳುತ್ತೇನೆ.